

### ಅಪರೂಪದ ಪ್ರವಾಸ ಕಥನ

ಹುರ್ಗಾಡ; ಕೆಂಪು ಕಡಲ ಕಿನಾರೆಯ ಊರು' (ಜೂ. 27, ಡಾ. ಪ್ರೇಮಲತ ಬಿ.) ಪ್ರವಾಸ ಕಥನ, ಅಪರೂಪದ ಸ್ಥಳವನ್ನು ಪರಿಚಯ ಮಾಡಿಕೊಟ್ಟಿತು. ಈಜಿಪ್ಟ್ ದೇಶದ ಈ ಸುಂದರ ನಗರದ ಚರಿತ್ರೆ, ಬೆಳವಣಿಗೆಯ ಪರಿ ಆಸಕ್ತಿಕರ ಎನಿಸಿತು. ಪ್ರವಾಸೋದ್ಯಮದ ಮೇಲೆ ಅವಲಂಬಿತವಾಗಿರುವ ಈ ನಗರದಲ್ಲಿನ ಬಡತನದ ಚಿತ್ರಣ ಕಂಡು ಬೇಸರವೂ ಆಯಿತು.

—ಚಿತ್ರಾ ಎನ್.ಕೆ., ಬೆಂಗಳೂರು



### ಪ್ರಬುದ್ಧ ದಾಂಪತ್ಯ

'ದಹನ' (ಜೂ. 27, ಹೂವಿನಹಳ್ಳಿ ನಾಗರಾಜ) ಕಥೆ ಚೆನ್ನಾಗಿದೆ. ಕ್ಲಿಷ್ಟವಿಲ್ಲದೆ ಸರಳವಾಗಿ ಓದಿಸಿಕೊಂಡು ಹೋಗುತ್ತದೆ. ವಿಶಾಲ– ವೈಶಾಲಿಯವರದ್ದು ಆದರ್ಶ ದಾಂಪತ್ಯ ಎನ್ನುವುದಕ್ಕಿಂತ ಪ್ರಬುದ್ಧ ದಾಂಪತ್ಯ ಎನ್ನಬಹುದು. ದಾಂಪತ್ಯದ ಸೂಕ್ಷ್ಮವನ್ನೂ ಕಥೆ ಒಳಗೊಂಡಿದೆ. ಒಂದು ಘಟನೆ ಮನಸ್ಸಿನ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬುದನ್ನು ಚೆನ್ನಾಗಿ ತೋರಿದೆ.

—ಲಲಿತಾ ರೆಡ್ಡಿ, ಗುಲ್ಬರ್ಗ

### ಯುವಪೀಳಿಗೆಗೆ ಮಾದರಿ

'ರಾಮೋಜಿ ರಾಯರೆಂಬ ಫ್ಯಾಂಟಸಿ' (ಜೂ. 27, ಎನ್ವಿ) ಬರಹ ರಾಮೋಜಿರಾವ್ ಅವರ ಬಗ್ಗೆ ಹಲವು ವಿಷಯಗಳನ್ನು ತಿಳಿಸಿಕೊಟ್ಟಿತು. ಬಡತನದ ಬದುಕಿನಿಂದ ಬಂದರೂ ಕೆಚ್ಚಿನಿಂದ ಎದ್ದು ನಿಂತು, ಯಾವುದೇ ಗದ್ದಲವಿಲ್ಲದೆ, ವಿವಾದಗಳಿಲ್ಲದೆ ಎಷ್ಟೆಲ್ಲಾ ಮೇರುಸಾಧನೆ ಮಾಡಿದ ರಾಮೋಜಿರಾವ್ ಅವರ ಔನ್ನತ್ಯದ ಬದುಕು ಯುವಪೀಳಿಗೆಗೆ ಮಾದರಿಯಾಗಲಿ.

—ಜ್ಯೋತಿ ಉಮೇಶ್, ಮೈಸೂರು

### ರಸವತ್ತಾದ ನಿರೂಪಣೆ

'ಗುನುಂಗ್ ಪದಾಂಗ್; ವಿಸ್ಮಯದ ಗುಡ್ಡದ ಮೇಲೆ ಒಂದು ಮಾಂತ್ರಿಕ ಸಂಜೆ' (ಜೂ. 13, ನೇಮಿಚಂದ್ರ) ಲೇಖನ ಸುಂದರವಾಗಿದೆ. ಅಕ್ಕಪಕ್ಕದ ಗುಡ್ಡಗಳಿಗೆ ಹೋಗದಿರುವ ಜನರ ಮಧ್ಯೆ ಇಂಡೊನೇಷ್ಯಾದಲ್ಲಿರುವ ಗುನುಂಗ್ ಪದಾಂಗ್ ಗುಡ್ಡದ ಮೇಲೆ ನೇಮಿಚಂದ್ರ ಅವರ ಸಾಹಸ ಮೆಚ್ಚುವಂಥದ್ದು. ನಿರೂಪಣೆಯಂತೂ ರಸವತ್ತಾಗಿದೆ.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

### ಅನುಪಮ ಚಿತ್ರಣ

'ಡಾಕ್ಟರ್ ಸಾಹೇಬ್'; ರಾಮಮನೋಹರ ಲೋಹಿಯಾ ಜೀವನಯಾನ ಧಾರಾವಾಹಿ ಚೆನ್ನಾಗಿ ಬರುತ್ತಿದೆ. ಶ್ರೇಷ್ಠ ಸಮಾಜವಾದಿ ಚಿಂತಕ ಲೋಹಿಯಾ ಅವರ ವಿಚಾರಧಾರೆ ಮತ್ತು ಅವರ ಜೀವನವನ್ನು ಲೇಖಕ ನಟರಾಜ್ ಹುಳಿಯಾರ್ ಅವರು ಅನುಪಮವಾಗಿ ಚಿತ್ರಿಸಿದ್ದಾರೆ.

—ಎ.ಪಿ. ರಾಧಾಕೃಷ್ಣ






### ನಮಗೆ ಸುಸ್ಥಿರ ನಗರಗಳೇ ಬೇಕು

'ಸ್ಮಾರ್ಟ್ v/s ಸುಸ್ಥಿರ; ನಮಗೆಂಥಾ ನಗರ ಬೇಕು?' (ಜೂ. 27, ಗುರುರಾಜ್ ಎಸ್. ದಾವಣಗೆರೆ) ವಿಶ್ಲೇಷಣಾತ್ಮಕ ಲೇಖನ ಜಗತ್ತಿನಲ್ಲಿರುವ ವಿವಿಧ ನಗರಗಳ ವಿರಾಟ್ ಸ್ವರೂಪವನ್ನೇ ತೆರೆದಿಟ್ಟಿತು. ಸುಸ್ಥಿರ ನಗರವೆನಿಸಿಕೊಳ್ಳಲು ಅಲ್ಲಿ ಏನೆಲ್ಲಾ ಇರಬೇಕು ಎಂಬ ಮಾಹಿತಿ ನೀಡಿತು. ಸಮರ್ಥ ಯೋಜನೆ ಅನುಷ್ಠಾನಗಳಿಂದ ಈಗಾಗಲೇ ಸ್ಮಾರ್ಟ್ ನಗರಗಳೆನಿಸಿರುವ ಬೇರೆ ಬೇರೆ ದೇಶಗಳ ನಗರಗಳ ಪರಿಚಯ ಆಯಿತು. ನಮ್ಮ ರಾಜಧಾನಿ ಬೆಂಗಳೂರು ಸಹ ಸ್ಮಾರ್ಟ್ ನಗರ ಯೋಜನೆಗೆ ಆಯ್ಕೆ ಆಗಿದೆ. ಆದರೆ ಯಾವ ದೃಷ್ಟಿಯಲ್ಲಿಯೂ ಸ್ಮಾರ್ಟ್ ಆಗಿಲ್ಲ. ಎಲ್ಲಿ ನೋಡಿದರೂ ಕಸ, ಜನಸಂದಣಿ, ಗುಂಡಿ ಬಿದ್ದ ರಸ್ತೆಗಳು, ಗಬ್ಬು ನಾರುವ ಕೆರೆಗಳೇ ಕಾಣಿಸುತ್ತವೆ. ಲೇಖಕರು ಪ್ರತಿಪಾದಿಸುವಂತೆ ಅಪಾರ ಸಂಪನ್ಮೂಲ ಬೇಡುವ ಸ್ಮಾರ್ಟ್ ನಗರಗಳಿಗಿಂತ ತನ್ನ ಅವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳುವ ಸುಸ್ಥಿರ ನಗರಗಳು ನಮಗೆ ಬೇಕು.

—ಕರ್ಣಂ ವಿ. ಶ್ರೀರಾಮ್, ಹಲವಾಗಿಲು

### ಗಮನಿಸಬೇಕಾದ್ದು ಸಾಕಷ್ಟಿದೆ

'ಸ್ಮಾರ್ಟ್ ಯೋಜನೆ'ಯಲ್ಲಿ ಕರ್ನಾಟಕದ ಏಳು ನಗರಗಳೂ ಸೇರಿವೆ. ಆದರೆ ಬೆಂಗಳೂರು ಮತ್ತು ದಾವಣಗೆರೆ ನೋಡಿದಾಗ, ಸಾಕಷ್ಟು ಕೆಲಸಗಳು ಆಗಬೇಕಿವೆ ಎನಿಸಿತು. ಹೈಟೆಕ್ ಬಸ್‌ಸ್ಟ್ಯಾಂಡ್, ಏರ್‌ಪೋರ್ಟ್ ಇವಿಷ್ಟರಿಂದಲೇ ಪರಿಪೂರ್ಣವಾಗುವುದಿಲ್ಲ. ಮಳೆನೀರು ಕೊಯ್ಲು, ಒಳಚರಂಡಿ, ಪಾದಚಾರಿ ರಸ್ತೆ, ಇವೆಲ್ಲ ಗಮನಿಸಬೇಕಾದ ಅಂಶಗಳೇ. ಝಗಮಗಿಸುವ ಬೆಳಕು, ರಾತ್ರಿ ನೋಡಲಿಕ್ಕೆ ಆಕರ್ಷಕವಷ್ಟೆ.

—ಸೋಮಣ್ಣ ಡಿ.ಎಸ್.

### 'ಸ್ಮಾರ್ಟ್' ಆಲೋಚನೆ!

ಒಂದು ನಗರ 'ಸ್ಮಾರ್ಟ್' ಎನಿಸಿಕೊಳ್ಳಲು ಅಲ್ಲಿನ ಜನ, ಜೀವನ, ಆರ್ಥಿಕತೆ, ವಾತಾವರಣ ಮತ್ತು ಚಲನಶೀಲತೆ ಎಲ್ಲವೂ ಸ್ಮಾರ್ಟ್ ಆಗಿರಬೇಕು ಎಂಬುದು ಸತ್ಯ ವಿಚಾರ. ಆರೋಗ್ಯಯುತ ಸಮಾಜ, ಆರೋಗ್ಯವಂತ ನಾಗರಿಕರನ್ನು ಗಮನದಲ್ಲಿ ಇಟ್ಟುಕೊಂಡು ಯೋಜನೆಗಳು ರೂಪುಗೊಳ್ಳಲಿ.

—ಕಿರಣ್ ಕುಮಾರ್ ಎಸ್., ಮೈಸೂರು

### ಮನಸ್ಸಿಗೆ ಮುದ ತಂದ ಬರಹ

ಪ್ರಾಣಿಗಳಿಗೆ ಭಾಷೆ ಇದೆಯೇ? (ಜೂ. 27, ಪ್ರಕಾಶ ಗ. ಖಾಡೆ) ಬರೆದಿರುವ ಬರಹ ಮನಸ್ಸಿಗೆ ಮುದ ನೀಡಿತು. ಪಶು ಪಕ್ಷಿಗಳಿಗೂ ಅದರದೇ ಆದ ಭಾಷೆಗಳುಂಟು. ಕುಹೂ ಕುಹೂ, ಕಾಕಾ, ಚೀವ್ ಚೀವ್, ಬೌಬೌ, ಮಿಯಾವ್ ಮುಂತಾದವು. ಹಸುಗೂಸಿನ ಅಳು ಸಹ ಎಳೆವೆಯ ಭಾಷೆ. ಗಿಡಮರಗಳೂ ಸಂತಸ ವ್ಯಕ್ತಪಡಿಸುವ ರೀತಿ ತಂಗಾಳಿಯಾಗಬಹುದು. ಹೊಚ್ಚಹೊಸ ಹಸುರೆಲೆ ಆನಂದದ ಸಂಕೇತವೇ ಅಲ್ಲವೇ? ಹೀಗಾಗೇ ಗಿಡಮರಗಳ ಸ್ಪರ್ಶ ಸಂವೇದನೆಯಿಂದ ಮನಸ್ಸು ಉಲ್ಲಾಸಗೊಳ್ಳುವುದು. ಸಾಕು ಪ್ರಾಣಿಗಳೊಂದಿಗೆ ಮಾತನಾಡಿದರೆ ದುಗುಡ ನೀಗುವುದು. ಅಲ್ಲವೇ?

—ಮಧುರ ಸುಬ್ರಹ್ಮಣ್ಯ, ಬೆಂಗಳೂರು



### ಪ್ರಾಣಿಗಳ ವಿಶಿಷ್ಟ ಕಲೆ

ಪ್ರಾಣಿಗಳ ವಿಶಿಷ್ಟ ಸಂವಹನ ಕಲೆಯ ಬಗ್ಗೆ ಓದಿ, ಮನುಷ್ಯರಾದ ನಾವು ಅವುಗಳ ಭಾವನಾ ಪರಿಭಾಷೆ ತಿಳಿಯುವಲ್ಲಿ ಹಿಂದುಳಿದಿದ್ದೇವೆ ಎನಿಸಿತು. ಪ್ರಾಣಿಗಳ ಧ್ವನಿ ಭಾಷಿಕ ಕಲಿಯುವ ಮನಸ್ಸಾಯಿತು.

— ಅಂಕುಶ್ ಗೌಡ

**ಪ್ರತಿಕ್ರಿಯಿಸಿ**

ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in